**ದಿನಾಂಕಃ 20-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು: ದೂರುದಾರ ಪರ ವಕೀಲರಿಂದಃ**

1) ನಾನು ಐಟಿಐ ಓದಿರುತ್ತೇನೆ. ನಾನು ಕನಕಾಪುರ ವಾಸಿ ಎಂದರೆ ಸರಿ. ಅಲ್ಲಿಂದ ಗಿಣಗೇರ ಊರು 1 ½ ಕಿಮೀ ದೂರ ಇರುತ್ತದೆ. ನಾನು ಕಾರ್ಮಿಕರನ್ನು ಕಾರ್ಖಾನೆಗೆ ನೇಮಿಸುವ ಕೆಲಸ ಮಾಡುತ್ತೇನೆ. ನಾನು ಸದರಿ ಕೆಲಸ ಮಾಡಲು ಪರವಾನಿಗೆ ಪಡೆದಿರುತ್ತೇನೆ. ಸದರಿ ಪರವಾನಿಗೆ ಯನ್ನು ಮುಂದೆ ಹಾಜರು ಪಡಿಸುತ್ತೇನೆ. ನನ್ನ ಅಡಿಯಲ್ಲಿ 2023 ರವರಗೆ 60 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಈಗ 6 ಕಾರ್ಮಿಕರು ಇರುತ್ತಾರೆ. ಈಗಲೂ ಸಹ ಲೇಬರ್ ಕಾಂಟ್ರಾಕ್ಟರ್ ಆಗಿಯೇ ಕೆಲಸ ಮಾಡುತ್ತಿದ್ದೇನೆ. ಲೇಬರ್ ಕಾಂಟ್ರಾಕ್ಟರ್ ಆಗಲು ಕಡಿಮೆ ಎಂದರೂ 20 ಜನ ಕಾರ್ಮಿಕರನ್ನು ಹೊಂದಿರಬೇಕು ಎಂದರೆ ಸರಿ. ನಾನು ಯಾವುದೇ ತಯಾರಿಕಾ ಘಟಕ ಹೊಂದಿರುವುದಿಲ್ಲ. ಪಿರ್ಯಾದಿಯ ಮಗ ಮೆಕ್ಯಾನಿಕಲ್ ಇಂಜಿನಿಯರ್ ಆಗಿರುತ್ತಾರೆ ಎಂದರೆ ಗೊತ್ತಿಲ್ಲ. ಪಿರ್ಯಾದಿಯ ಮಗ ನನಗೆ 2019-2020 ಸಾಲಿನಲ್ಲಿ ಮೊದಲ ಬಾರಿ ಬೇಟಿ ಆಗಿರುತ್ತಾರೆ. ಪಿರ್ಯಾದಿಯ ಮಗನನ್ನು ನನಗೆ ಅವರ ಕಾಕಾ ಮಹೇಶ ಸಾತಪೂತೆ ರವರು ಬೇಟಿ ಮಾಡಿಸಿರುತ್ತಾರೆ. ಸದರಿ ಮಹೇಶ ರವರು ಎಮ್ ಸ್ಯಾಂಡ್ ನ್ನು ಕಾರ್ಖಾನೆ ಗೆ ಪೂರೈಸುತ್ತಿದ್ದ ಕಾರಣ ನನಗೆ ಪರಿಚಯ ವಾಗಿದ್ದರು. ಪಿರ್ಯಾದಿಯ ಮಗ 2018 ಸಾಲಿನಲ್ಲಿ ಹೊಸಪೇಟೆಯ ಸ್ಟೀಲ್ ಇಂಡಸ್ಟ್ರಿಯಲ್ಲಿ ಇಂಜಿನಿಯರ್ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

2. ನನಗೆ 2019 ಸಾಲ್ಲಿನಲ್ಲಿ ಪಿರ್ಯಾದಿಯ ಮಗನನ್ನು ಸದರಿ ಮಹೇಶರವರು ಪರಿಚಯ ಮಾಡಿಸಿ ಒಟ್ಟಿಗೆ ಕೆಲಸ ಮಾಡುವಂತೆ ಹೇಳಿದ್ದರು. ನಾನು ಹಾಗೂ ಪಿರ್ಯಾದಿಯ ಮಗ 1 ½ ವರ್ಷ ಒಟ್ಟಿಗೆ ಕೆಲಸ ಮಾಡಿದ್ದು , ನಿಖರವಾದ ದಿನಾಂಕ ಹೇಳಲು ಬರುವುದಿಲ್ಲ. ಆರೋಪಿಯ ಮಗನಿಗೆ ಪ್ರತಿ ತಿಂಗಳ ಅವರ ಖಾತೆಗೆ ಜಮಾ ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ಆರೋಪಿಯ ಮಗ ಗ್ರೈಂಡಿಂಗ್ ಕೆಲಸ ಮಾಡುತ್ತಿದ್ದೇವು. ನಾವಿಬ್ಬರೂ ಒಟ್ಟಿಗೆ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆ ಇದ್ದು ಮುಂದೆ ಹಾಜರು ಪಡಿಸುತ್ತೇನೆ. ನನ್ನ ಹಾಗೂ ಆರೋಪಿಯ ಮಗನ ಕೆಲಸ ಬೇರೆ ಬೇರೆ ಸ್ವರೂಪದಾಗಿದ್ದು ನಾವಿಬ್ಬರೂ ಒಟ್ಟಿಗೆ ಕೆಲಸ ಮಾಡುವ ಪ್ರಶ್ನೆಯೆ ಇಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದಿಯ ಮಗನಿಗೆ 4 ಖಾಲಿ ಚೆಕ್ ಗಳನ್ನು ನೀಡಿದ್ದೇ ಎನ್ನುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಸದರಿ 4 ಚೆಕ್ ಗಳ ನಂಬರಗಳನ್ನು ಹೇಳಲು ಬರುವುದಿಲ್ಲ. ನಾನು ಪಿರ್ಯಾದಿಯ ಮಗನಿಗೆ ಚೆಕ್ ಗಳ ವಿವರವನ್ನು ದಾಖಲಿಸಿಕೊಂಡಿರುತ್ತೇನೆ. ನಾನು ಪಿರ್ಯಾದಿಯ ಮಗನಿಗೆ ಚೆಕ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯ ಮಗನಿಗೆ ಹಾಗೂ ನನ್ನ ನಡುವೆ ಜಂಟಿ ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ.

3. ಪಿರ್ಯಾದಿ ಮತ್ತು ಅವರ ಸಹೊದರ ಮಹೇಶ ಸೇರಿ ಲಾಜಿಸ್ಟಿಕ್ ವ್ಯವಹಾರವನ್ನು ನಡೆಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದಿಯ ಮಗನಿಂದ, ಪಿರ್ಯಾದಿ ಪರಿಚಯ ವಾಗಿದ್ದು, ಯಾವ ದಿನಾಂಕದಿಂದ ಪರಿಚಯವಾಗಿರುತ್ತಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಪಿರ್ಯಾದಿಯಿಂದ ನಾನು ಅಡಚಣೆ ಇದ್ದದ್ದಕ್ಕಾಗಿ ಹಣ ಪಡೆದಿದ್ದೆ ಎಂದರೆ ಸರಿಯಲ್ಲ . ನಾನು ಅವರಿಂದ ಹಣ ಪಡೆಯದ ಕಾರಣ , ಅವರಿಗೆ ಹಣ ಮರಳಿಸುವ ಅವಶ್ಯಕತೆ

ಇರುವುದಿಲ್ಲ. ನಿಪಿ.1 ನನ್ನ ಖಾತೆಯ ಚೆಕ್ ಆಗಿರುತ್ತದೆ ಎಂದರೆ ಸರಿ. ನಿಪಿ –1ಎ ನನ್ನ ಸಹಿ ಎಂದರೆ ಸರಿ. ನಿಪಿ.1 ಅಮಾನ್ಯಗೊಂಡ ಕಾರಣ ಪ್ರಸ್ತುತ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ , ತಾವು ಪಿರ್ಯಾದಿಯ ಮಗನಿಗೆ ಚೆಕ್ ನೀಡಿದ್ದು, ಅವನ್ನು ದುರಪಯೋಗ ಪಡೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 30.04.2022 ರಂದು ಪಿರ್ಯಾದಿ ನನಗೆ ಖಾಯ್ದೆ ಬದ್ದ ನೋಟಿಸ್ ನೀಡಿದ್ದರು ಎಂದರೆ ಸರಿ. ನನಗೆ ಕಳುಹಿಸಿದ ಸದರಿ ನೋಟಿಸ್ ತಿರಸ್ಕೃತವಾಗಿ ಮರಳಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದಿಗೆ ಹಣ ಕೊಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.